**ದಿನಾಂಕ:03-06-2023 ರಂದು ನಡೆದ ಕರ್ನಾಟಕ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಪ್ರಾಧಿಕಾರದ 60ನೇ ತಾಂತ್ರಿಕ ಸಮಿತಿ ಸಭೆಯ ನಡವಳಿಗಳು**

ಮುಖ್ಯ ಮೌಲ್ಯಮಾಪನಾಧಿಕಾರಿಗಳು, ಕರ್ನಾಟಕ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಪ್ರಾಧಿಕಾರ ಹಾಗೂ ತಾಂತ್ರಿಕ ಸಮಿತಿಯ ಸದಸ್ಯ ಕಾರ್ಯದರ್ಶಿಗಳು ಇವರು ಸಭೆಯ ಅಧ್ಯಕ್ಷರು, ತಾಂತ್ರಿಕ ಸಮಿತಿಯ ಸದಸ್ಯರು, ಪ್ರಾಧಿಕಾರದ ಅಧಿಕಾರಿಗಳು, ವಿವಿಧ ಇಲಾಖೆಯ ಮತ್ತು ಸಮಾಲೋಚಕ ಸಂಸ್ಥೆಯ ಪ್ರತಿನಿಧಿಗಳನ್ನು ಸ್ವಾಗತಿಸಿದರು.

ಕಾರ್ಯಸೂಚಿಯಂತೆ ಈ ಕೆಳಕಂಡ ಮೌಲ್ಯಮಾಪನ ಅಧ್ಯಯನಗಳ ಪರಿಶೀಲನೆ ಮಾಡಲಾಯಿತು. ವಿವರವಾದ ಚರ್ಚೆಯ ನಂತರ ಅಧ್ಯಯನವಾರು ಸಲಹೆ/ಸೂಚನೆಗಳನ್ನು ಈ ಕೆಳಗಿನಂತೆ ನೀಡಲಾಗಿದೆ.

| ಕರಡು ಮೌಲ್ಯಮಾಪನ ವರದಿಗಳು | | |
|---|---|---|
| 1 | Evaluation of Jungle Lodges and Resorts from 2015-16 to 2019-20<br><br>**ಯೋಜನೆ ಅನುಷ್ಠಾನ ಇಲಾಖೆ:**<br>ಜಂಗಲ್ ಲಾಡ್ಜ್‌ಗಳು ಮತ್ತು ರೆಸಾರ್ಟ್‌ಗಳು & ಆರ್ಥಿಕ ಇಲಾಖೆ<br><br>**ಸಮಾಲೋಚಕ ಸಂಸ್ಥೆ:** HKCAL<br><br>**ಅಧ್ಯಯನದ ಅವಧಿ:**<br>27-09-2021 ರಿಂದ 27-04-2022 | ಸಮಲೋಚಕ ಸಂಸ್ಥೆಯವರು ಸ್ವತಂತ್ರ ಮೌಲ್ಯಮಾಪಕರು, ಅನುಷ್ಠಾನ ಇಲಾಖೆ ಮತ್ತು ಪ್ರಾಧಿಕಾರದಿಂದ ನೀಡಿರುವ ಸಲಹೆ / ಸೂಚನೆಗಳನ್ನು ಅಳವಡಿಸಿ, ಪರಿಷ್ಕೃತ ಕರಡು ಮೌಲ್ಯಮಾಪನ ವರದಿಯನ್ನು ಕ್ರೋಢಿಕರಿಸಿ ಸಲ್ಲಿಸುವ ಷರತ್ತಿನೊಂದಿಗೆ ಸದರಿ ಅಧ್ಯಯನವನ್ನು ಅನುಮೋದಿಸಲಾಯಿತು. |
| 2 | Impact Evaluation of Government Hostels for SC/ST/OBC students on Enrolment, Transition and Learning Outcomes in Karnataka (2014-15 to 2018-19) for attaining Targets under SDG 4 and SDG 10<br><br>**ಯೋಜನೆ ಅನುಷ್ಠಾನ ಇಲಾಖೆ:**<br>ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ<br>**ಸಮಾಲೋಚಕ ಸಂಸ್ಥೆ:** HKCAL<br><br>**ಅಧ್ಯಯನದ ಅವಧಿ:**<br>26-08-2021 ರಿಂದ 26-02-2022 | ಸಮಾಲೋಚಕ ಸಂಸ್ಥೆರವರು ಸದರಿ ಮೌಲ್ಯಮಾಪನ ಅಧ್ಯಯನದ ಶಿಫಾರಸ್ಸುಗಳು ಹಾಗೂ ಶೋಧನೆಗಳನ್ನು ವಿಸ್ತಾರವಾಗಿ ಸಭೆಯಲ್ಲಿ ಪ್ರಸ್ತುತಪಡಿಸಲಾಗಿ ಈ ಕೆಳಕಂಡ ಸೂಚನೆಗಳನ್ನು ನೀಡಲಾಯಿತು<br>➢ ಸಮಾಜ ಕಲ್ಯಾಣ, ಅಲ್ಪಸಂಖ್ಯಾತರು, ಹಿಂದುಳಿದ ವರ್ಗಗಳು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಮತ್ತು ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆಯ ಸರ್ಕಾರಿ ಹಾಸ್ಟೆಲ್‌ಗಳಲ್ಲಿ ದಾಖಲಾತಿಗಾಗಿ "ಏಕ ಪೋರ್ಟಲ್" ಅನ್ನು ಸಾಮಾನ್ಯ ವೇದಿಕೆಯಾಗಿ ಅಭಿವೃದ್ಧಿಪಡಿಸಲು ಶಿಫಾರಸು ಮಾಡುವುದು.<br>➢ ಚಾಮರಾಜನಗರ, ಬೆಂಗಳೂರು ಗ್ರಾಮಾಂತರ,ಕೊಡಗು ಮತ್ತು ಮೈಸೂರು ಜಿಲ್ಲೆಗಳಲ್ಲಿನ ಹಿಂದುಳಿದ ವರ್ಗಗಳ ಇಲಾಖೆಯ ವಸತಿ ನಿಲಯಗಳಲ್ಲಿ ಶೇಕಡ 50ಕ್ಕಿಂತ ಕಡಿಮೆ ಪ್ರಮಾಣದ ದಾಖಲಾದ ವಿಷಯಕ್ಕೆ ಸಂಬಂಧಿಸಿದಂತೆ ಚಾಮರಾಜನಗರ ಜಿಲ್ಲೆಯ ಒಟ್ಟು ದಾಖಲಾತಿ ಪ್ರಮಾಣ ಮತ್ತು ವಿದ್ಯಾಸಿರಿ ಫಲಾನುಭವಿಗಳ ಸಂಖ್ಯೆಯನ್ನು ವರದಿಯಲ್ಲಿ ಅಳವಡಿಸುವುದು. |

| | | |
|---|---|---|
| | | ➢ ಚಾಮರಾಜನಗರ ಜಿಲ್ಲೆಯಲ್ಲಿ ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆಯ ಹಾಸ್ಟೆಲ್‌ಗಳೊಂದಿಗೆ ಬಾಲಕಿಯರ ಹಾಸ್ಟೆಲ್‌ಗಳ ವಿಲಿನಗೊಳಿಸುವ ಬಗ್ಗೆ ವರದಿಯಲ್ಲಿ ಅಳವಡಿಸುವುದು.<br>➢ ಕಡಿಮೆ ಪ್ರಮಾಣದ ದಾಖಲಾತಿಗೆ ಸಂಬಂಧಿಸಿದಂತೆ ಮತ್ತು ದಾಖಲಾತಿಯನ್ನು ಸುಧಾರಿಸಲು ಸೂಕ್ತ ಕಾರ್ಯತಂತ್ರಗಳನ್ನು ವರದಿಯ ಶಿಫಾರಸ್ಸುಗಳಲ್ಲಿ ಅಳವಡಿಸುವುದು.<br>➢ ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿನಿಯರು ವಿದ್ಯಾರ್ಥಿ ನಿಲಯದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರವೇಶ ಪಡೆಯಲು ಮಾಡಬೇಕಾದ ಕಾರ್ಯತಂತ್ರದ ಬಗ್ಗೆ ವರದಿಯಲ್ಲಿ ಅಳವಡಿಸುವುದು ಹಾಗೂ ಭಾಷಾ ಸಮಸ್ಯೆ, ಸಾಂಸ್ಕೃತಿಕ ಭಿನ್ನತೆ ಮುಂತಾದವುಗಳಂತಹ ಕಾರಣಗಳನ್ನು ಗುರುತಿಸುವಲ್ಲಿ ಹೆಚ್.ಡಿ. ಕೋಟೆ ತಾಲೂಕಿನ ಹೊಸಹಳ್ಳಿ ಗ್ರಾಮದ ವಸತಿಸಹಿತ ಶಾಲೆಯಲ್ಲಿ ವಿದ್ಯಾರ್ಥಿನಿಯರಿಗೆ ಸ್ಥಳೀಯ ಶಿಕ್ಷಕರಿಂದ ಬೋದನೆ ನೀಡಲಾಗಿ ವಿದ್ಯಾರ್ಥಿನಿಯರ ಕಲಿಕೆ ಫಲಿತಾಂಶ ಉತ್ತಮವಾಗಿರುವ ಪ್ರಕರಣ ಅಧ್ಯಯನ ವರದಿಯಲ್ಲಿ ಅಳವಡಿಸುವುದು.<br>➢ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಪ್ರೀಮೆಟ್ರಿಕ್ ಹಾಸ್ಟೆಲ್‌ಗಳಲ್ಲಿ ಕಡಿಮೆ ವಸತಿ ಇರುವ ಕಾರಣ ಸಮೀಪದ ಇತರ ಇಲಾಖೆ ಹಾಸ್ಟೆಲ್‌ಗಳೊಂದಿಗೆ ವಿಲೀನಗೊಳಿಸಲು ಶಿಫಾರಸು ಮಾಡಲು ಸೂಚಿಸಲಾಯಿತು.<br>➢ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ವಸತಿನಿಲಯಗಳನ್ನು ಸರ್ಕಾರೇತರ ಸಂಸ್ಥೆಗಳಿಂದ ನಡೆಸುತ್ತಿರುವುದರಿಂದ ಕಾಲಕಾಲಕ್ಕೆ ಸರ್ಕಾರದ ಅನುದಾನ ಬಿಡುಗಡೆ ಮಾಡುವಲ್ಲಿ ಕ್ರಮವಹಿಸಲು ಹಾಗೂ ಆಹಾರದ ದರ, ಸಿಬ್ಬಂದಿ ವೇತನ, ಆಹಾರ ಚಾರ್ಟ್, ಕುಂದುಕೊರತೆ ಪರಿಹಾರಗಳ ಬಗ್ಗೆಗಿನ ಸೌಲಭ್ಯಗಳು ಒದಗಿಸಿದಲ್ಲಿ ಹೆಣ್ಣುಮಕ್ಕಳ ಶಿಕ್ಷಣದಲ್ಲಿ ಗಮನಾರ್ಹ ಹೆಚ್ಚಿಸುವ ಕುರಿತು ವರದಿಯಲ್ಲಿ ವಿವರಿಸುವುದು.<br>➢ ಕಲಿಕಾ ಫಲಿತಾಂಶವನ್ನು ವಿಶ್ಲೇಷಿಸಲು ಸರ್ಕಾರಿ ಹಾಸ್ಟೆಲ್‌ಗಳಲ್ಲಿ ವಾಸಿಸುವ ವಿದ್ಯಾರ್ಥಿಗಳ ಫಲಿತಾಂಶಗಳೊಂದಿಗೆ ರಾಜ್ಯ ಎಸ್ ಎಸ್‌ಎಲ್‌ಸಿ ಮಂಡಳಿಯ ವರ್ಗವಾರು ಫಲಿತಾಂಶಗಳ ತುಲನಾತ್ಮಕ ವಿಶ್ಲೇಷಣೆಯನ್ನು ವರದಿಯಲ್ಲಿ ಅಳವಡಿಸುವುದು.<br>➢ ತುಮಕೂರು ಜಿಲ್ಲೆಯಯಲ್ಲಿ ಸರ್ಕಾರಿ ಶಾಲೆಗಳಿಂದ ವಸತಿನಿಲಯಗಳ ಅಂತರ, ಸರ್ಕಾರಿ ನಿವೇಶನಗಳ ಲಭ್ಯತೆ/ |

| | | |
|---|---|---|
| | | ನಿವೇಶನಗಳ ಖರೀದಿಸುವ ಅಂಶಗಳನ್ನು ಒಳಗೊಂಡ ಎಲ್ಲಾ ಸೌಲಭ್ಯಗಳೊಂದಿಗೆ ಹೊಸ ಹಾಸ್ಟೆಲ್‌ಗಳ ನಿರ್ಮಾಣದ ಕುರಿತಂತೆ ಹಾಸ್ಟೆಲ್‌ಗಳ ಬೇಡಿಕೆ ವಿಶ್ಲೇಷಣೆಯ ಪ್ರಾಯೋಗಿಕ ಅಧ್ಯಯನ ನಡೆಸಿ ವರದಿಯಲ್ಲಿ ಅಳವಡಿಸುವುದು.<br>**ಮೇಲೆ ನೀಡಲಾಗಿರುವ ಎಲ್ಲಾ ಸೂಚನೆಗಳನ್ನು ಅಳವಡಿಸಿ ಪರಿಷ್ಕೃತ ವರದಿಯನ್ನು ಒಂದು ವಾರದೊದಲ್ಲಿ ಪ್ರಾಧಿಕಾರಕ್ಕೆ ಸಲ್ಲಿಸಬೇಕೆಂಬ ಷರತ್ತಿನೊಂದಿಗೆ, ಮೌಲ್ಯಮಾಪನ ಅಧ್ಯಯನವನ್ನು ಸಮಿತಿಯು ಅನುಮೋದಿಸಲಾಯಿತು.** |
| 3 | Evaluation of Impact of beneficiary, infrastructure and assets-oriented schemes implemented under RKVY / RKVY-RAFTAAR-Department of Agriculture / Horticulture / Sericulture / Watersheds & Corporations in Karnataka (2015-16 to 2019-20)<br><br>**ಯೋಜನೆ ಅನುಷ್ಠಾನ ಇಲಾಖೆ:** ಕೃಷಿ, ತೋಟಗಾರಿಕೆ, ರೇಷ್ಮೆ, ಜಲಾನಯನ ಅಭಿವೃದ್ಧಿ ಮತು ಇತರೆ ನಿಗಮಗಳು.<br><br>**ಸಮಾಲೋಚಕ ಸಂಸ್ಥೆ:**<br>Atheno Infonomics<br><br>**ಅಧ್ಯಯನದ ಅವಧಿ: 29–03–2023 ರಿಂದ 29–10–2023** | ಸಮಲೋಚನೆ ಸಂಸ್ಥೆಯು ಪ್ರಸ್ತುತ ಪಡಿಸಿದ ಕರಡು ಮೌಲ್ಯಮಾಪನ ವರದಿಗೆ ಈ ಕೆಳಕಂಡ ಸೂಚನೆ/ ಸಲಹೆಗಳನ್ನು ನೀಡಲಾಯಿತು.<br>1) **ಕರ್ನಾಟಕ ಬೀಜ ಅಭಿಯಾನ** :<br>➢ ರೈತರು ಬಿತ್ತನೆ ಮಾಡುವ ಮುನ್ನ ಸಕಾಲದಲ್ಲಿ ಲಭ್ಯವಾಗುವಂತೆ ರಿಯಾಯಿತ ಬೀಜ ವಿತರಣೆಗೆ ಸಹಕರಿಸಲು "STIMULATION MODEL BASED TOOL" ಉಪಯುಕ್ತತೆ ಕುರಿತಂತೆ ಅನುಷ್ಠಾನ ಇಲಾಖಾ ಮತ್ತು ಪ್ರಾದಿಕಾರದ ಅಧಿಕಾರಿಗಳಿಗೆ ಪ್ರಾತ್ಯಕ್ಷಿಕೆ ನೀಡಲು ಸಮಾಲೋಚಕ ಸಂಸ್ಥೆಗೆ ತಿಳಿಸಲಾಯಿತು.<br>2) **ಕೃಷಿ ಸಂಸ್ಕರಣ ಘಟಕ ವಿತರಣೆ** :<br>➢ ಭೂಹಿಡುವಳಿ ಮತ್ತು ಕೃಷಿ ಸಂಸ್ಕರಣ ಘಟಕಗಳ ಉಪಯುಕ್ತತೆ ಕುರಿತು ಪರಸ್ಪರ ಸಂಬಂಧ ಅನ್ವಯ ಬೇಡಿಕೆ ಪರಿಶೀಲಿಸಿ, ಎಲ್ಲಾ ಕೃಷಿ ಸಂಸ್ಕರಣಾ ಘಟಕಗಳ ಬೆಳೆವಾರು, ಜಿಲ್ಲಾವರು ಬೇಡಿಕೆ ವಿವರ ಕುರಿತು ಶಿಫಾರಸ್ಸು ಮಾಡುವುದು.<br>➢ ಸಕಾಲದಲ್ಲಿ ರೈತರು ಕೃಷಿ ಸಂಸ್ಕರಣಾ ಉಪಕರಣಗಳನ್ನು ಭಾಡಿಗೆ ಆಧಾರದಲ್ಲಿ ಪಡೆಯಲು ಸರ್ಕಾರದ ಮತ್ತು ಖಾಸಗಿ ಸಂಸ್ಥೆಗಳ ಬಾಡಿಗೆ ಆಧಾರಿತ ಯಂತ್ರೋಪಕರಣಗಳ ಸೇವಾ ಕೇಂದ್ರಗಳ (CUSTOM HIRE CENTRES) ಮಾಹಿತಿಯುಳ್ಳ DIRECTORY ತಯಾರಿಸುವ ಬಗ್ಗೆ ಶಿಫಾರಸ್ಸನ್ನು ವರದಿಯಲ್ಲಿ ಅಳವಡಿಸುವುದು.<br>3. **ರೈತರ ಸಂಪರ್ಕ ಕೇಂದ್ರಗಳು:**<br>ಕೃಷಿ ಆಧಾರಿತ ಸೇವೆಗಳಿಗೆ ಸಿಬ್ಬಂದಿ ಕೊರತೆಯಿಂದಾಗಿ ರೈತ ಸಂಪರ್ಕ ಕೇಂದ್ರಗಳಲ್ಲಿ ಏಕ ಗವಾಕ್ಷಿ ವಿಧಾನದ ಸಾರ್ವಜನಿಕ ಖಾಸಗಿ ಸಹಭಾಗಿತ್ವ (PPP) ಮಾದರಿಯಲ್ಲಿ ಈ ಕೆಳಕಂಡ ಅಂಶಗಳನ್ನು ಪರಿಗಣಿಸಿ ಶಿಫಾರಸ್ಸು ಮಾಡುವುದು. |

| | | |
|---|---|---|
| | | ➢ ಪ್ರತಿ ಇಲಾಖೆಯಲ್ಲಿ ಮಂಜೂರಾದ ಹುದ್ದೆಗಳ ಮತ್ತು ಖಾಲಿ ಹುದ್ದೆಗಳ ದತ್ತಾಂಶದೊಂದಿಗೆ ಒಂದು ಪ್ರಕರಣ ಅಧ್ಯಯನ (ಕೇಸ್ ಸ್ಟಡಿ) ಮಾಡಿ ವರದಿಯಲ್ಲಿ ಅಳವಡಿಸುವುದು.<br>➢ ಕೃಷಿ ಮತ್ತು ಸಂಬಂಧಿತ ವಲಯಗಳ ಕ್ಷೇತ್ರ ಸಿಬ್ಬಂದಿ ಮತ್ತು ATMA ಸಿಬ್ಬಂದಿ, ಕೃಷಿ ವಿಶ್ವವಿದ್ಯಾಲಯದ ಕೃಷಿ ವಿಜ್ಞಾನ ಕೇಂದ್ರಗಳು ಮತ್ತು ವಿಸ್ತರಣಾ ಕೇಂದ್ರಗಳ ಸಿಬ್ಬಂದಿಯನ್ನು ಒಗ್ಗೂಡಿಸುವುದು.<br>➢ ತೋಟಗಾರಿಕೆ ಇಲಾಖೆಯ ಹಸಿರು ಆಪ್, ಕೃಷಿ ಇಲಾಖೆಯ K-KISAN ಆಪ್ ಮತ್ತು ಸಂಬಂಧಿತ ಆಪ್ ಗಳು ಸೇರಿದಂತೆ ಎಲ್ಲಾ ರೈತ ಸ್ನೇಹಿ ಅಪ್ ಗಳನ್ನು ವಿಲೀನಗೊಳಿಸಿ ಸಮಗ್ರ ಸೇವೆಗಳನ್ನು ಪಡೆಯಲು ಪೂರಕವಾಗುವಂತೆ ಕ್ರಮ ಸೂಚಿಸುವುದು.<br>➢ ವಿಸ್ತರಣಾ ಚಟುವಟಿಕೆಗಳಿಗಾಗಿ ಪ್ರಗತಿಪರ ರೈತರ ಸೇವೆಗಳನ್ನು ಉಪಯೋಗಿಸುವ ಬಗ್ಗೆ ಶಿಫಾರಸ್ಸನ್ನು ಅಳವಡಿಸುವುದು.<br>➢ <u>ಸಾರ್ವಜನಿಕ ಖಾಸಗಿ ಸಹಭಾಗಿತ್ವ (ಸಮಗ್ರ ಕೃಷಿ ಅಭಿವೃದ್ಧಿ)</u> ಸದರಿ ಯೋಜನೆಯಡಿ ಕ್ಷೇತ್ರ ಮಟ್ಟದಲ್ಲಿ ಉದ್ಭವಿಸುವ ಹಲವಾರು ಸಮಸ್ಯಗಳನ್ನು ಪರಷ್ಕರಿಸಲು ಜಿಲ್ಲಾವಾರು ಸ್ಟೀರಿಂಗ್ ಸಮಿತಿ (ಅಧಿಕಾರಿಗಳು, ಪ್ರಗತಿ ಪರ ರೈತರು, ಖಾಸಗಿ ಸಂಸ್ಥೆ ಪ್ರತಿನಿಧಿ ಒಳಗೊಂಡಂತೆ) ರಚನೆಯ ಶಿಫಾರಸ್ಸು ಮಾಡುವುದು.<br>➢ ಹೊಸ ಮಾರುಕಟ್ಟೆ ಮಾರ್ಗಗಳನ್ನು ಅನ್ವೇಷಿಸಲು ಮತ್ತು ಒಂದು ಟ್ರಿಲಿಯನ್ ಡಾಲರ್ ಜಿಡಿಪಿ ಆರ್ಥಿಕತೆಯನ್ನು ಸಾಧಿಸಲು ಪೂರಕವಾಗುವಂತೆ ರಾಜ್ಯದಲ್ಲಿ ಹಾಲಿ ಲಭ್ಯವಿರುವ ಹೆಚ್ಚುವರಿ 47 ಲಕ್ಷ ಟನ್‌ಗಳ ಹಾಳಾಗುವ ಕೃಷಿ ಉತ್ಪನ್ನಗಳ ಮಾಹಿತಿ ಹಾಗು ಕೃಷಿ ಆಧಾರಿತ ಕೈಗಾರಿಕೆಗಳ ಮ್ಯಾಪಿಂಗ್ ಮಾಡಲು ಸೂಚಿಸಲಾಯಿತು.<br>➢ ರಫ್ತು ಮಾರ್ಗಸೂಚಿಗಳ ಸುಗಮ ಅನುಸರಣೆಯನ್ನು ಸಕ್ರಿಯಗೊಳಿಸಲು ಸಮಗ್ರ ಕೃಷಿ ಅಭಿವೃದ್ಧಿಗಾಗಿ ಸಾರ್ವಜನಿಕ ಖಾಸಗಿ ಸಹಭಾಗಿತ್ವ (PPP IAD) ಮಾದರಿಗಳನ್ನು ದೊಡ್ಡ ಪ್ರಮಾಣದಲ್ಲಿ ಹೆಚ್ಚಿಸಲು ಶಿಫಾರಸ್ಸು ಮಾಡುವುದು.<br>**5. <u>ಕರ್ನಾಟಕ ರಾಜ್ಯ ಉಗ್ರಾಣ ನಿಗಮ :</u>**<br>➢ ಉಗ್ರಾಣ ರಶೀದಿಗಳ ಮಾಹಿತಿಯನ್ನು ಮತ್ತೊಮ್ಮೆ ಇಲಾಖಾ ಅಧಿಕಾರಿಗಳೊಂದಿಗೆ ಸಮಾಲೋಚಿಸಿ ಪರಿಷ್ಕರಿಸುವುದು.<br>➢ ನಿಗಮದವತಿಯಿಂದ ನಿಗದಿತ ಕಾಲಮಿತಿಯೊಳಗೆ ಉಗ್ರಾಣ ನಿರ್ಮಾಣ ಕಾರ್ಯವು ಪೂರ್ಣಗೊಂಡಿರದಿದ್ದರೂ ವರದಿಯಲ್ಲಿ ನಿಗದಿತ ಅವಧಿಯಲ್ಲಿ ಪೂರ್ಣಗೊಳ್ಳಲು ಕ್ರಮ ವಹಿಸಿದೆಯೆಂದು |

| | | |
|---|---|---|
| | | ವರದಿಯಲ್ಲಿ ನೀಡಿರುವುದು ವಾಸ್ತವಾಂಶವಾಗಿರದ ಕಾರಣ, ಈ ವಿಷಯವನ್ನು ಪರಿಷ್ಕರಿಸಲು ತಿಳಿಸಲಾಯಿತು.<br><br>**<u>ಇತರೆ ಸಮಾನ್ಯ ಸೂಚನೆಗಳು:</u>**<br><br>1) ಕರಡು ಮೌಲ್ಯಮಾಪನ ವರದಿಯಲ್ಲಿ ನೀಡಿರುವ ದ್ವಿತಿಯ ದತ್ತಾಂಶದ ಮೂಲದ ವಿವರ ಇಲಾಖೆ ಅಧಿಕಾರಿಗಳೊಂದಿಗೆ ಸಮಾಲೊಚಿಸಿ ಅವರ ಅಭಿಪ್ರಾಯ ಪಡೆದು ಪರಿಷ್ಕರಿಸುವುದು.<br>2) ಪ್ರಾಧಿಕಾರದಿಂದ ನೀಡಲಾಗಿರುವ ಉಲ್ಲೇಖದ ನಿಯಮಗಳಲ್ಲಿನ ಹಲವಾರು ಉದ್ದೇಶಗಳ ಮೌಲ್ಯಮಾಪನೆ ಮಾಡದಿರುವುದನ್ನು ಗಮನಿಸಲಾಗಿದ್ದು, Terms of Reference ಅನ್ವಯ ಎಲ್ಲಾ ಯೋಜನೆಗಳ ಮೌಲ್ಯಮಾಪನ ಉದ್ದೇಶಗಳನ್ವಯ ಶಿಫಾರಸ್ಸುಗಳನ್ನು ಅಳವಡಿಸುವುದು.<br>3) ಕರಡು ಮೌಲ್ಯಮಾಪನ ವರದಿಯಲ್ಲಿ ಹಲವಾರು ನ್ಯೂನ್ಯತೆಗಳು ಕಂಡು ಬಂದಿದ್ದು ಪ್ರಾಧಿಕಾರದ ಅಧಿಕಾರಿಗಳೊಂದಿಗೆ ಸಮಾಲೊಚಿಸಿ, ಪ್ರಾಧಿಕಾರವು ಕಾಲಕಾಲಕ್ಕೆ ನೀಡಿರುವ ಎಲ್ಲಾ ಸೂಚನೆಗಳನ್ನು ಅಳವಡಿಸಲು ತಿಳಿಸಲಾಯಿತು.<br><br>**<u>ಮೇಲೆ ನೀಡಲಾಗಿರುವ ಎಲ್ಲಾ ಸೂಚನೆಗಳನ್ನು ಅಳವಡಿಸಿ 3 ವಾರಗಳೊಳಗಾಗಿ ಪರಿಷ್ಕೃತ ವರದಿಯನ್ನು ಪ್ರಾಧಿಕಾರಕ್ಕೆ ಸಲ್ಲಿಸಬೇಕೆಂಬ ಷರತ್ತಿನೊಂದಿಗೆ, ಮೌಲ್ಯಮಾಪನ ಅಧ್ಯಯನವನ್ನು ಸಮಿತಿಯು ಅನುಮೊದಿಸಲಾಯಿತು.</u>** |
| 4 | Impact Evaluation of works carried out by Kalyana Karnataka Region Development Board (KKRDB) in 2021-22<br><br>**ಸಮಾಲೋಚಕ ಸಂಸ್ಥೆ:**<br><br>Centre for Sustainable Development | ದಿನಾಂಕ: 01–06–2023 ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಯೋಜನ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ರವರ ಅಧ್ಯಕ್ಷತೆಯಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಸೂಚಿಸಿರುವಂತೆ ಎಲ್ಲಾ ಅಂಶಗಳನ್ನು ಪರಿಷ್ಕರಿಸಿ ಐದು ದಿನಗಲ್ಲಿ ಪರಿಷ್ಕೃತ ವರದಿ ಸಲ್ಲಿಸಲು ಸೂಚಿಸಲಾಯಿತು. |
| 5 | Evaluation of impact of IAS/KAS training programme implemented by Kalyana Karnataka Human Resource, Agriculture and Cultural Society.<br><br>**ಸಮಾಲೋಚಕ ಸಂಸ್ಥೆ:**<br><br>Nairuthya Art Media | ➢ ಸದರಿ ಅಧ್ಯಯನದ ಕುರಿತಂತೆ ಪ್ರಾಧಿಕಾರದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಸೂಚಿಸರುವ ಸಲಹೆಗಳನ್ನು ಅಳವಡಿಸದೆ ಇರುವುದನ್ನು ಗಮನಿಸಲಾಗದ್ದು ಒಂದು ವಾರದೊಳಗಾಗಿ ಅಧ್ಯಯನದ ವರದಿಯನ್ನು ಪಾಧಿಕಾರಕ್ಕೆ ಸಲ್ಲಿಸಲು ತಿಳಿಸಲಾಯಿತು.<br>➢ ಸದರಿ ತರಬೇತಿಯ ಹಾಜರಾತಿಯನ್ವಯ ತರಬೇತುದಾರರು ಪಡೆದಿರುವ ತರಬೇತಿ ಸ್ಟೈಪೆಂಡ್ ವಿವರಗಳನ್ನು ಅಳವಡಿಸುವುದು. |

| | | |
|---|---|---|
| | | ➢ ಅಧ್ಯಯನ ಅವಧಿಯಲ್ಲಿ ತರಬೇತಿ ಪಡೆದಿದ್ದ ಅಭ್ಯರ್ಥಿಗಳಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಸರ್ಕಾರದ ವಿವಿಧ ಹುದ್ದೆಗಳಿಗೆ ಆಯ್ಕೆಯಾದ ವಿವರಗಳನ್ನು ಅಳವಡಿಸುವುದು.<br>➢ ವರದಿಯಲ್ಲಿನ ದತ್ತಾಂಶದಲ್ಲಿ ಅನೇಕ ನ್ಯೂನ್ಯತೆಗಳಿದ್ದು ನಿರ್ಧಿಷ್ಟ ಅಂಕಿ ಅಂಶಗಳನ್ನು ವರದಿಯಲ್ಲಿ ಅಳವಡಿಸುವುದು.<br>➢ ವರದಿಯಲ್ಲಿ ಪುನರಾವರ್ತಿತ ಫೋಟೋಗಳನ್ನು ಸರಿಪಡಿಸಲು ಸಮಾಲೋಚಕ ಸಂಸ್ಥರವರಿಗೆ ಎಚ್ಚರಿಕೆ ನೀಡಲಾಗಿದೆ<br>ಈ ನಿಟ್ಟಿನಲ್ಲಿ ಸಮಾಲೋಚಕ ಸಂಸ್ಥೆರವರು ಕಾರ್ಯದರ್ಶಿಗಳು **KKRDB** ರವರಿಂದ ಅಧ್ಯಯನಕ್ಕೆ ಸಂಬಂಧಿಸಿದಂತೆ ಎಲ್ಲಾ ಮಾಹಿತಿ ಹಾಗು ದತ್ತಾಂಶಗಳನ್ನು ಪಡೆದು ವರದಿಯಲ್ಲಿ ಅಳವಡಿಸಿ ಒಂದು ವಾರದೊಳಗಾಗಿ ಪರಿಷ್ಕೃತ ವರದಿ ಸಲ್ಲಿಸಲು ಸೂಚಿಸಿದರು. |

(ಡಾ.ರಿಚರ್ಡ್ ವಿನ್ಸೆಂಟ್ ಡಿಸೋಜ, ಭಾ.ಆ.ಸೇ.)

ಸದಸ್ಯ ಕಾರ್ಯದರ್ಶಿಗಳು, ತಾಂತ್ರಿಕ ಸಮಿತಿ,
ಮತ್ತು
ಮುಖ್ಯ ಮೌಲ್ಯಮಾಪನಾಧಿಕಾರಿಗಳು
ಕರ್ನಾಟಕ ಮೇಲ್ವಿಚಾರಣೆ & ಮೌಲ್ಯಮಾಪನ ಪ್ರಾಧಿಕಾರ

(ಡಾ.ಶಾಲಿನಿ ರಜನೀಶ್, ಭಾ.ಆ.ಸೇ.,)

ತಾಂತ್ರಿಕ ಸಮಿತಿಯ ಅಧ್ಯಕ್ಷರು ಹಾಗೂ
ಅಪರ ಮುಖ್ಯ ಕಾರ್ಯದರ್ಶಿಗಳು, ಯೋಜನೆ, ಕಾರ್ಯಕ್ರಮ
ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ